


ISSN 2455-2720

Negila Miditha

# ನೇಗಿಲ ಮಿಡಿತ

ಸಂಪುಟ 5 ಸಂಚಿಕೆ 10 ಅಕ್ಟೋಬರ್ 2019





ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ

ಶಿವಮೊಗ್ಗ - 577 204

ಸಾಧಕ ರೈತ

# ಮೊಲ ಸಾಕಣೆಯಲ್ಲಿ ಯಶಸ್ಸು ಕಂಡ ರೈತ ಮಹಿಳೆ

✍ ಸಂತೋಷ ಶಿಂಧೆ, 8791107090, ರವಿ ವೈ., ಸವಿತಾ ಬಿ., ಹೀನಾ ಎಮ್. ಎಸ್., ಎಸ್. ಎಸ್. ಅಂಜುಮ್
ಮತ್ತು ಆರ್. ಬಿ. ನೆಗಳೂರ, ಐ. ಸಿ. ಎ. ಆರ್. ಕೃಷಿ ವಿಜ್ಞಾನ ಕೇಂದ್ರ, ಇಂಡಿ, ವಿಜಯಪುರ (II)

ಮಹಿಳೆಯರು ಅಡುಗೆ ಮನೆಗಷ್ಟೇ ಈಗ ಸೀಮಿತವಿಲ್ಲ. ಆರ್ಥಿಕವಾಗಿ ಸದೃಢವಾಗಲು ಉದ್ಯಮಶೀಲತೆ ಬೆಳೆಸಿಕೊಂಡು ಹೂಡಿಕೆಯತ್ತ ಮುಖ ಮಾಡುತ್ತಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ ಇಂಡಿ ತಾಲೂಕಿನ ತೆಗ್ಗಿಹಳ್ಳಿ ಗ್ರಾಮದ ಶ್ರೀಮತಿ ಶಾಂತಾಬಾಯಿ ಬಿರಾದಾರ ಇವರು ಉಳಿತಾಯದ ಹಣದಿಂದ ಮೊಲ ಸಾಕಾಣಿಕೆಯನ್ನು ಆರಂಭಿಸಿದ್ದಾರೆ ಹಾಗೂ ಇದು ತಾಲೂಕಿನಲ್ಲಿ ಏಕೈಕ ಮಹಿಳೆಯರ ಮೊಲ ಸಾಕಾಣಿಕೆ ಘಟಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಶ್ರೀಮತಿ ಶಾಂತಾಬಾಯಿ ಬಿರಾದಾರ(8105627915) ಹಾಗೂ ಅಶೋಕ ಬಿರಾದಾರ ದಂಪತಿಗಳು ಇಂಡಿ ತಾಲೂಕಿನ ತೆಗ್ಗೆಹಳ್ಳಿ ಗ್ರಾಮದಲ್ಲಿ ಐದು ಎಕರೆ ಪ್ರದೇಶದಲ್ಲಿ ತೊಗರಿ, ಗೋಧಿ, ಮೆಕ್ಕೆಜೋಳದಂತಹ ಕೃಷಿ ಬೆಳೆಗಳನ್ನು ಮಾಡಿಕೊಂಡಿದ್ದಾರೆ ಹಾಗೆ ಎರಡು ಎಕರೆಯಲ್ಲಿ ಲಿಂಬೆ ಗಿಡಗಳ ಜೊತೆಯಲ್ಲಿ ಸಾಗುವಾನಿ ಗಿಡಗಳನ್ನು ಬೆಳೆಸುತ್ತಿದ್ದಾರೆ. ಮೂಲತಃ ಕೃಷಿ ಕುಟುಂಬದಿಂದ ಬಂದ ಇವರು ತಮ್ಮ ಓದು ಮುಂದುವರೆಸದೆ ಕೃಷಿ ಮತ್ತು ಇತರೆ ಚಟುವಟಿಕೆಗಳನ್ನು ಮಾಡಲು ನಿರ್ಧರಿಸಿದರು. ಇದೆಲ್ಲದರ ಜೊತೆಯಲ್ಲಿ ಮನೆ ಆವರಣದಲ್ಲಿಯೇ ಎರಡು ವರ್ಷಗಳಿಂದ ಮೊಲ ಸಾಕಾಣಿಕೆ ಮಾಡುತಿದ್ದಾರೆ ಮತ್ತು ಅದೊಂದು ವಿಶೇಷ ಆಕರ್ಷಣೆ ಮಾಡುವ ಉದ್ಯಮವಾಗಿದೆ. ಮೊಟ್ಟ ಮೊದಲಿಗೆ ಮೊಲಗಳ ಸಾಕಾಣಿಕೆ ಮಾಡಲು ಶ್ರೀಮತಿ ಶಾಂತಾಬಾಯಿ ಬಿರಾದಾರ ಅವರಲ್ಲಿ ಆಸಕ್ತಿ ಮೂಡಿಸಿದ್ದು ಅವರ ಮಗ ಮಂಜುನಾಥ ಬಿರಾದಾರ. ಮಂಜುನಾಥ ಬಿರಾದಾರ ಅವರು ತಮ್ಮ ಗೆಳೆಯನೊಬ್ಬ ಮೊಲ ಸಾಕಾಣಿಕೆ ಮಾಡುತ್ತಿರುವುದನ್ನು ನೋಡಿ ಇವರಿಗೂ ಕೂಡ ಹುಮ್ಮಸ್ಸು ಬಂದಿತು. ಮಗ ಮಂಜುನಾಥ ದಿನನಿತ್ಯದ ಮನೆ ಕೆಲಸದ ಜೊತೆಯಲ್ಲಿ ಮೊಲ ಸಾಕಾಣಿಕೆಯನ್ನು ಸಹ ಮನೆ ಕೆಲಸದಂತೆ ಮಾಡಬಹುದೆಂದು ತಾಯಿಯನ್ನು ಮೊಲ ಸಾಕಲು ಪ್ರೋತ್ಸಾಹಿಸಿದರು.

ಮೊದಲಿಗೆ, ಇವರು ಇನ್ನಿತರರು ಮಾಡಿಕೊಂಡಿರುವ ಮೊಲ ಸಾಕಾಣಿಕೆ ಘಟಕವನ್ನು ವೀಕ್ಷಿಸಿ ತಮ್ಮದೆ ಆದ ವಿಚಾರದಿಂದ ಕಡಿಮೆ ಬೆಲೆಯಲ್ಲಿ ಮೊಲ ಸಾಕಾಣಿಕೆಗೆ ಬೇಕಾದ ವಸ್ತುಗಳನ್ನು ಖರೀದಿಸಿ ಮೊಲ ಸಾಕಾಣಿಕೆ ಘಟಕವನ್ನು ಅತಿ ಕಡಿಮೆ ಬಂಡವಾಳದಿಂದ ಕಟ್ಟಿಕೊಂಡಿದ್ದಾರೆ.


ಮೊಲ ಸಾಕಾಣಿಕೆ ಘಟಕಕ್ಕೆ ವಿಜ್ಞಾನಿಗಳ ಭೇಟಿ


ಮೊಲ ಸಾಕಾಣಿಕೆ ಘಟಕ

ಇದರಲ್ಲಿ 10 ಅಡಿ ಉದ್ದ, 2 ಅಡಿ ಎತ್ತರ ಮತ್ತು 3 ಅಡಿ ಅಗಲದ ಪೆಟ್ಟಿಗೆ/ಕೇಜ್ ಅನ್ನು ರೂ. 3000/– ರಂತೆ ಖರೀದಿಸಿದ್ದಾರೆ. ಪೆಟ್ಟಿಗೆ ನೆಲದಿಂದ ಮೂರು ಅಡಿ ಎತ್ತರ ಇರುವಂತೆ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಇದರಿಂದ ಕೆಳಭಾಗದಲ್ಲಿ ಮೊಲದ ಹಿಕ್ಕೆ ಸಂಗ್ರಹಿಸಲು ಹಾಗೂ ಮೊಲಗಳಿಗೆ ಶೀತವಾಗದಂತೆ ನೋಡಿಕೊಳ್ಳಲು ಮತ್ತು ಬೆಕ್ಕು, ನಾಯಿ ಇತ್ಯಾದಿ ಶತ್ರುಗಳ ಅಪಾಯದಿಂದ ಕಾಪಾಡಲು ಸಹಾಯ ಆಗುತ್ತದೆ ಎನ್ನುತ್ತಾರೆ ಶ್ರೀಮತಿ ಶಾಂತಾಬಾಯಿ ಬಿರಾದಾರ ಅವರು. ಈ ರೀತಿಯ ಒಟ್ಟು ಮೂರು ಕೇಜ್ ಅನ್ನು ಸಿದ್ಧಪಡಿಸಿಕೊಂಡಿದ್ದಾರೆ ಮತ್ತು ಪ್ರತಿ ಕೇಜ್‌ನಲ್ಲಿ 10 ಕಂಪಾರ್ಟಮೆಂಟ್‌ಗಳನ್ನು ಮಾಡಿಕೊಂಡಿದ್ದಾರೆ. ಮೊಲ ಮರಿ ಹಾಕಿದಾಗ ಉಳಿದ ಮೊಲಗಳಿಂದ ತೊಂದರೆ ಆಗದಂತೆ ನೋಡಿಕೊಳ್ಳಲು ಈ ಕಂಪಾರ್ಟಮೆಂಟ್‌ಗಳನ್ನು ಸಿದ್ಧಪಡಿಸಿದ್ದಾರೆ. ಮೊಲಗಳಿಗೆ ಆಹಾರ ಒದಗಿಸಲು ಅನುಕೂಲವಾಗುವಂತೆ ಮೇಲ್ಭಾಗದಲ್ಲಿ ಬಾಗಿಲು ರೀತಿಯ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಮಂಜುನಾಥ ಬಿರಾದಾರ ಅವರು ಕೇರಳ ಮೂಲದ ಮೊಲ ಸಾಕಾಣಿಕೆದಾರರೊಬ್ಬರಿಂದ ರೂ. 15,000 ಪ್ರತಿ ಯೂನಿಟ್‌ರಂತೆ 5 ಯೂನಿಟ್‌ಗೆ ಸೂಮಾರು ರೂ. 75,000 ಗಳನ್ನು ಖರ್ಚು ಮಾಡಿ ಕೇವಲ 2 ತಿಂಗಳ ಅವಧಿಯಲ್ಲಿ ಮೊಲ ಸಾಕಾಣಿಕೆ ಘಟಕವನ್ನು ಸ್ಥಾಪಿಸಿದ್ದರು. ಪ್ರತಿಯೊಂದು ಯೂನಿಟ್‌ನಲ್ಲಿ 10 ಮೊಲಗಳನ್ನು ಸಾಕುತ್ತಿದ್ದಾರೆ ಮತ್ತು ಅದರಲ್ಲಿ 7 ಹೆಣ್ಣು ಮತ್ತು 3 ಗಂಡು ಮೊಲಗಳನ್ನು ಸಾಕುತ್ತಿದ್ದಾರೆ. ಮಾರುಕಟ್ಟೆಯ ಬೇಡಿಕೆಯ ಆಧಾರದ ಮೇಲೆ ಅವರು ಮೊಲಗಳ ತಳಿಯನ್ನು ಆಯ್ಕೆ ಮಾಡಿದ್ದಾರೆ. ಸದ್ಯಕ್ಕೆ ನ್ಯೂಜಿಲೆಂಡ್ ವೈಟ್ ಹಾಗೂ ಚಿಂಚಿಲಾ ತಳಿಗಳನ್ನು ಸಾಕುತ್ತಿದ್ದಾರೆ. ಒಂದು ಮೊಲ 45 ರಿಂದ 60 ದಿವಸದ ಅವಧಿಯಲ್ಲಿ 5–10 ಮರಿ ಹಾಕುತ್ತವೆ ಹಾಗೂ ಮರಿಗಳ ಸಾವಿನ ಸಂಭವನೀಯತೆ ಶೇ. 4–5ರಷ್ಟು ಮಾತ್ರ ಇರುತ್ತದೆ ಎನ್ನುತ್ತಾರೆ. ಸಾಕಿದ ನಾಲ್ಕು ತಿಂಗಳಿಗೆ 2 ರಿಂದ 2.5 ಕೆ.ಜಿ ಸರಾಸರಿ ದೇಹದ ತೂಕ ಹೊಂದುತ್ತವೆ.



ನೆಲಗಡಲೆ ಬಿತ್ತಿ, ಕಾವಲಿಗೆ ಕಾಗೆಯನ್ನು ನೇಮಿಸಿದಂಗೆ!

ಮೊಲದ ಗರ್ಭದ ಅವಧಿ 28–30 ದಿನಗಳು ಇರುವುದರಿಂದ ವರ್ಷಕ್ಕೆ 6–7 ಬಾರಿ ಮರಿ ಹಾಕುವ ಸಾಧ್ಯತೆ ಇರುತ್ತದೆ ಎನ್ನುತ್ತಾರೆ. ಮೊಲದ ಸಂತಾನೋತ್ಪತ್ತಿಯ ವೈಶಿಷ್ಟ್ಯವೆಂದರೆ 2,4,6 ಅಥವಾ 8 ಹೀಗೆ ಸಮ ಸಂಖ್ಯೆಗಳಲ್ಲಿ ಮರಿಹಾಕುತ್ತವೆ. ಮರಿಗಳು 4–6 ತಿಂಗಳಾಗುತ್ತಿದ್ದಂತೆ ಪ್ರಾಯಕ್ಕೆ ಬಂದು ಸಂತಾನೋತ್ಪತ್ತಿ ಆರಂಭಿಸುತ್ತವೆ.

**ಮೊಲ ಸಾಕಣೆಯಿಂದ ಬರುವ ಲಾಭ:** ಸಾಮಾನ್ಯವಾಗಿ ಮೂರು ಕೇಜ್‌ಗಳ ತುಂಬ ಮೊಲಗಳನ್ನು ಸಾಕುತ್ತಾರೆ ಹಾಗೂ 15 ದಿನವಾಗುತ್ತಿದ್ದಂತೆ ಮರಿಗಳು ನಿಧಾನವಾಗಿ ದೊಡ್ಡದಾಗುತ್ತವೆ ಮತ್ತು ಅವುಗಳು ಒಂದು ತಿಂಗಳಾಗುತ್ತಿದ್ದಂತೆ ಮಾರುತ್ತೇವೆ ಎನ್ನುತ್ತಾರೆ. ಮರಿ ಮೊಲಗಳಿಗೆ ಜೋಡಿಗೆ ರೂ.200 ರಿಂದ 300 ಹಾಗೂ ದೊಡ್ಡ ಮೊಲಗಳನ್ನು ರೂ. 400 ರಿಂದ 500ರಂತೆ ಮಾರಾಟ ಮಾಡುತ್ತಿದ್ದಾರೆ. ಇವರು ಮರಿ ಮೊಲಗಳ ಜೋಡಿ ಹಾಗೂ ವಯಸ್ಕ ಮೊಲಗಳನ್ನು ಕಲಬುರ್ಗಿ, ಬೆಂಗಳೂರು, ಮದ್ರಾಸ್ ಹಾಗೂ ಹೈದರಾಬಾದ್ ನಗರಗಳಿಗೆ ಮಾರಾಟ ಮಾಡುತ್ತಾರೆ. ಪ್ರತಿ ತಿಂಗಳು ಸರಾಸರಿ 28–30 ಜೊತೆ ಮೊಲದ ಮರಿಗಳನ್ನು ಮಾರಿ ಸುಮಾರು 9,000 ರೂ. ಆದಾಯ ಪಡೆಯುತ್ತೇವೆ ಎನ್ನುತ್ತಾರೆ. ಇನ್ನು ತಿಂಗಳಿಗೆ ಸರಾಸರಿ 30–35 ದೊಡ್ಡ ಮೊಲ ಮಾರಾಟ ಮಾಡುವುದರಿಂದ ಸುಮಾರು ರೂ.16000 ಆದಾಯವನ್ನು ಪಡೆಯುತ್ತಿದ್ದಾರೆ. ಶ್ರೀಮತಿ ಶಾಂತಾಬಾಯಿ ಬಿರಾದಾರ ಅವರ ಅನುಭವದಿಂದ ವರ್ಷಕ್ಕೆ ಕನಿಷ್ಠ 5 ಬ್ಯಾಚ್ ಮೊಲ ಸಾಕಾಣಿಕೆ ಮಾಡುತ್ತಾರೆ. ಒಂದು ವರ್ಷದಲ್ಲಿ ಸುಮಾರು 2.5ರಿಂದ 3 ಲಕ್ಷ ರೂ. ಒಟ್ಟು ಆದಾಯವನ್ನು ಪಡೆಯುತ್ತಿದ್ದಾರೆ. ಇದರಲ್ಲಿ ಮೊಲ ಖರೀದಿಸುವ ವೆಚ್ಚ, ಔಷಧಿಯ ವೆಚ್ಚ ಮತ್ತು ಆಹಾರದ (ಮೆಕ್ಕೆ ಜೋಳ ನುಚ್ಚು) ಖರ್ಚನ್ನು ತೆಗೆದರೆ ಸುಮಾರು ರೂ.1,50,000/– ಗಳಷ್ಟು ನಿವ್ವಳ ಆದಾಯವನ್ನು ಪಡೆಯುತ್ತಿದ್ದೇವೆ ಎನ್ನುತ್ತಾರೆ.

**ನಿರ್ವಹಣೆ:** ಮೊಲಗಳಿಗೆ ನೆಗಡಿ, ಜ್ವರ, ಬೇಧಿ, ಕಜ್ಜಿ ಹಾಗೂ ಇನ್ನಿತರೆ ಚರ್ಮ ರೋಗಗಳು ಸಾಮಾನ್ಯ. ಆದರೆ ಸಕಾಲಕ್ಕೆ ಅದನ್ನು ಗುರುತಿಸಿ ಸರಿಯಾದ ಚಿಕಿತ್ಸೆ ನೀಡದಿದ್ದರೆ ಸಾವು ನಿಶ್ಚಿತ ಎನ್ನುತ್ತಾರೆ. ರೋಗಗಳನ್ನು ಹತೋಟಿ ಮಾಡಲು ಮೊಲಗಳ ಕೊಠಡಿಯ ಸ್ವಚ್ಛತೆ, ಗಾಳಿ–ಬೆಳಕು ಹೇರಳವಾಗಿರುವಂತೆ ಕಾಳಜಿವಹಿಸುವುದು ಹಾಗೂ ತಿಂಗಳಿಗೊಮ್ಮೆ ಕೊಠಡಿಗೆ ಬ್ಲೀಚಿಂಗ್ ಪೌಡರ್ ಹಾಗೂ ಸುಣ್ಣ ಹಾಕುತ್ತೇವೆ ಎನ್ನುತ್ತಾರೆ. ಇದರ ಜೊತೆಯಲ್ಲಿ ಕೇಜ್‌ನಿಂದ ಕೆಳಬೀಳುವ ಹಿಕ್ಕೆ, ಮೂತ್ರವನ್ನು ಎರಡು ದಿನಕ್ಕೊಮ್ಮೆ ಗುಡಿಸಿ ಗೊಬ್ಬರ ಸಂಗ್ರಹಿಸುವುದು, ಸ್ವಚ್ಛ ಮಾಡುವುದು ಅಗತ್ಯ ಎನ್ನುತ್ತಾರೆ. ಈ ಹಿಕ್ಕೆ, ಮೂತ್ರದಲ್ಲಿ ಬೆಳೆಗೆ ಬೇಕಾಗುವ ಪೋಷಕಾಂಶ



ಮೊಲಗಳ ಆಹಾರವಾಗಿ ಕುದುರೆಮೆಂತೆಯ ಬಳಕೆ



ಮೊಲಗಳನ್ನು ಹಿಡಿಯುವ ವಿಧಾನ

ಇರುವುದರಿಂದ ನೀರಿನೊಂದಿಗೆ ಬೆರೆಸಿ ಅವರು ಮುಖ್ಯವಾಗಿ ಲಿಂಬೆಗೆ ಸಾವಯವ ಗೊಬ್ಬರದಂತೆ ಬಳಸಿ ಉತ್ತಮ ಫಲಿತಾಂಶ ಪಡೆಯುತ್ತಿದ್ದಾರೆ.

**ಮೊಲಗಳಿಗೆ ಕೊಡುವ ಆಹಾರ:** ಹುಲ್ಲು, ಗಜ್ಜರಿ, ಸವತೆ, ಕಲ್ಲಂಗಡಿ, ಮೂಲಂಗಿ ಇವು ಮೊಲಗಳಿಗೆ ಅಚ್ಚುಮೆಚ್ಚಿನ ಆಹಾರ. ಜೊತೆಯಲ್ಲಿ ಕುದುರೆಮೆಂತೆ ಅತ್ಯುತ್ತಮ ಆಹಾರ ಎನ್ನುತ್ತಾರೆ. ಇದರಿಂದ ಸಕ್ಕರೆ, ಪಿಷ್ಠ ಹಾಗೂ ಸಸಾರಜನಕ ಹೆಚ್ಚಿನ ಪ್ರಮಾಣದಲ್ಲಿ ಒದಗಿಸಲು ಸಾಧ್ಯ ಹಾಗೂ ಇವುಗಳಲ್ಲಿ ಕೊಬ್ಬಿನಂಶ ಹೆಚ್ಚಿಗೆ ಇರುವುದರಿಂದ ಮೊಲಗಳ ತೂಕವನ್ನು ಸಹ ಹೆಚ್ಚಿಸಬಹುದು ಎನ್ನುತ್ತಾರೆ. ಶ್ರೀಮತಿ ಶಾಂತಾಬಾಯಿ ಬಿರಾದಾರ ಅವರು ಅರ್ಧ ಎಕರೆಯಲ್ಲಿ ಕುದುರೆಮೆಂತೆ ಹಾಗೂ ಮೇವಿನ ಗೋವಿನ ಜೋಳ ಬೆಳೆದಿದ್ದಾರೆ. ಬೆಳಗಿನ ಸಮಯದಲ್ಲಿ ಅಕ್ಕಿ, ಗೋಧಿ, ತೊಗರಿ ಮತ್ತು ಗೋವಿನ ಜೋಳದ ನುಚ್ಚು ನೀಡುತ್ತಾರೆ ಹಾಗೂ ಬೇರೆ ಸಮಯದಲ್ಲಿ ಕುದುರೆಮೆಂತೆ, ಬೇಲಿಮೆಂತೆ (Hedge Lucerne), ಚೊಗಚೆ(Susbenia), ನುಗ್ಗೆಸೊಪ್ಪು ಮತ್ತು ತರಕಾರಿ ಬೆರೆತ ಹಸಿಮೇವು ಹಾಕುತ್ತಾರೆ. ಮುಖ್ಯವಾಗಿ ಎರಡು ಹೊತ್ತು ಕೇಜ್‌ನಲ್ಲಿ ಇಟ್ಟಿರುವ ತಂಬಿಗೆಯಲ್ಲಿ ಕುಡಿಯಲು ಶುದ್ಧ ನೀರು ಒದಗಿಸುತ್ತಿದ್ದಾರೆ.

ಇವನ್ನೆಲ್ಲ ಅರಿತು ಸೂಕ್ಷ್ಮವಾಗಿ ಮೊಲ ಸಾಕಾಣಿಕೆ ಮಾಡುವುದರಿಂದ ಲಾಭ ಪಡೆಯಲು ಸಾಧ್ಯ ಎನ್ನುತ್ತಾರೆ. ಕೇವಲ ಒಬ್ಬ ಮಹಿಳೆ ಮನೆ ಕೆಲಸವಲ್ಲದೆ ಹಲವಾರು ಮೊಲಗಳನ್ನು ನಿರ್ವಹಣೆ ಮಾಡಲು ಸಾಧ್ಯವಿದೆ ಎಂದು ಶ್ರೀಮತಿ ಶಾಂತಾಬಾಯಿ ಬಿರಾದಾರ ಅವರು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಬಹುದೆಂದು ತೋರಿಸಿ ಬೇರೆಯವರಿಗೆ ಮಾರ್ಗದರ್ಶಕರಾಗಿದ್ದಾರೆ.

**ಪ್ರಿಯ ಚಂದಾದಾರರೇ,** ನೇಗಿಲ ಮಿಡಿತ ನಿಮ್ಮ ಪತ್ರಿಕೆ. ನಿಮ್ಮ ಸಲಹೆ ಸೂಚನೆ, ಅನಿಸಿಕೆಗಳಿದ್ದರೆ ಮಿಡಿತ–ತುಡಿತ ಅಂಕಣಕ್ಕೆ ಪೋಸ್ಟ್ ಕಾರ್ಡಿನಲ್ಲಿ ಬರೆದು ಕಳುಹಿಸಲು ವಿನಂತಿ. ನಿಮ್ಮ ಪ್ರತಿಕ್ರಿಯೆ ನಮಗೆ ಬಹು ಅಮೂಲ್ಯ.

ಸಂ.

**ವಿಳಾಸ:**
ಸಂಪಾದಕರು, ಸಂವಹನ ಕೇಂದ್ರ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ–577204.